ಕ್ರಿ. ಸಂ. ಗುನ್ನೆ/180/ಗಂ.ಗ್ರಾ.ಠಾ/2023



ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ.
ದಿನಾಂಕ. 21-08-2023

ಗೆ,

ಮಾನ್ಯ ಉಪ ನಿರ್ದೇಶಕರು
ವಾರ್ತ ಮತ್ತು ಪ್ರಸಾರ ಇಲಾಖೆ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಕೊಪ್ಪಳ
ರವರಿಗೆ,

ವಿಷಯ :- ಗಂಗಾವತಿ ಗ್ರಾಮೀಣ ಠಾಣೆ ಗುನ್ನೆನಂ. 180/2023 ಕಲಂ. ಮಹಿಳೆ ಕಾಣೆ ಪ್ರಕರಣದಲ್ಲಿ ಕಾಣೆಯಾದ ಮಹಿಳೆ ಪತ್ತೆ ಮಾಡಲು ಪತ್ರಿಕೆ ಮತ್ತು ಮಾಧ್ಯಮಗಳಲ್ಲಿ ಪ್ರಸಾರ ಮಾಡುವ ಕುರಿತು.

****

ಈ ಮೇಲಿನ ವಿಷಯದಲ್ಲಿ ಮಾನ್ಯರವರಲ್ಲಿ ವಿನಂತಿ ಮಾಡಿಕೊಳ್ಳುವುದೇನಂದರೆ, ದಿನಾಂಕ: 21-08-2023 ರಂದು ರಾತ್ರಿ 8-00 ಗಂಟೆಗೆ ಫಿರ್ಯಾದಿದಾರರಾದ ಶ್ರೀನಿವಾಸ ತಂದೆ ರಾಮಾರಾವ್ ಬುದ್ದಾಲ ವಯಾ- 40 ವರ್ಷ ಜಾ- ಕಾಪು ಉ- ಒಕ್ಕಲುತನ ಸಾ : ಬಾಪಿರಡ್ಡಿಕ್ಯಾಂಪ್ ತಾ : ಗಂಗಾವತಿ ಜಿ- ಕೊಪ್ಪಳ ಮೊ- 99001706936 ಇವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಹಾಜರಪಡಿಸಿದ್ದು, ಅದರ ಸಾರಾಂಶ ಈ ಪ್ರಕಾರ ಇದೆ. ನನಗೆ 1] ತನುಜಾ ವಯಾ-20 ವರ್ಷ 2] ರಾಧಾ ವಯಾ- 19 ವರ್ಷ 3] ಬಸವೇಶ್ವರ ವಯಾ-14 ವರ್ಷ ಈ ರೀತಿಯಾಗಿ ಮೂರು ಜನ ಮಕ್ಕಳು ಇರುತ್ತಾರೆ. ನನ್ನ ಮಗಳಾದ ಕು: ರಾಧಾ ವಯಾ- 19 ವರ್ಷ ಇಕೆಯು ಗಂಗಾವತಿಯ ಬೇತಾಲ ಕಾಲೇಜಿನಲ್ಲಿ ಪಿ.ಯು.ಸಿ. 2 ನೇ ವರ್ಷದಲ್ಲಿ ವಿಧ್ಯಾಭ್ಯಾಸ ಮಾಡಿಕೊಂಡಿದ್ದಳು. ನನ್ನ ಮಗಳು ದಿನಾಲು ಬಾಪಿರಡ್ಡಿಕ್ಯಾಂಪಿನಿಂದ ಗಂಗಾವತಿಗೆ ಕಾಲೇಜಿಗೆ ಬಂದು ಹೊಗುವದು ಮಾಡುತ್ತಿದ್ದಳು. ದಿನಾಂಕ : 19-08-2023 ರಂದು ನನ್ನ ಮಗಳು ಬೆಳಗ್ಗೆ 9-00 ಗಂಟೆಯ ಸುಮಾರಿಗೆ ತಾನು ಗಂಗಾವತಿಯ ಕಾಲೇಜಿಗೆ ಹೊಗುವದಾಗಿ ನನ್ನ ಹೆಂಡತಿ ವಿಜಯದುರ್ಗಾ ಇವರ ಮುಂದೆ ಹೇಳಿ ಮನೆಯಿಂದ ತನ್ನ ಮೊಬೈಲ್ ಪೋನ್ ನಂ : 9901706936 ನೇದ್ದನ್ನು ತೆಗೆದುಕೊಂಡು ಹೊಗಿದ್ದಳು. ರಾತ್ರಿಯಾದರು ನಮ್ಮ ಮಗಳು ವಾಪಾಸ್ ಮನೆಗೆ ಬಾರದೆ ಇದ್ದರಿಂದ ನಾವು ಆಕೆಯ ಪೋನಿಗೆ ಕರೆಮಾಡಿದ್ದು ಸುಚ್ ಆಪ್ ಆಗಿದ್ದರಿಂದ ನಾವು ಗಂಗಾವತಿಯ ಬೇತಾಲ ಶಾಲೆಗೆ ಬಂದು ವಿಚಾರಿಸಲು ನಮ್ಮ ಮಗಳು ಕಾಲೇಜಿಗೆ ಬಂದಿರುವದಿಲ್ಲವೆಂದು ತಿಳಿಸಿದರು. ನಂತರ ನಾನು ಹಾಗೂ ನಮ್ಮೂರಿನ ಶಂಕರ ತಂದೆ ವೆಂಕಟರಾವ್ ಉಪ್ಪೇರಲಾ, ಸುಬ್ರಮಣ್ಯ ತಂದೆ ಕೃಷ್ಣಾ ದೊಮ್ಮೇಟಿ ರವರು ಕೂಡಿಕೊಂಡು ಗಂಗಾವತಿ, ಕಾರಟಗಿ, ಬಸವಣ್ಣಕ್ಯಾಂಪ್, ಹಂಚಿನಾಳ ಕ್ಯಾಂಪ್ ಕಡೆಗೆ ಹೊಗಿ ಹುಡುಕಾಡಲು ಸಿಕ್ಕಿರುವದಿಲ್ಲ. ಕಾಣೆಯಾದ ನನ್ನ ಮಗಳು ರಾಧಾ ಇಕೆಯು ಚಹರೆ ಪಟ್ಟಿ ಈ ಕೆಳಗಿನಂತಿದೆ.ಹೆಸರು. ಕು: ರಾಧಾ ತಂದೆ ಶ್ರೀನಿವಾಸ ಬುದ್ದಾಲ. ವಯಸ್ಸು 19 ವರ್ಷ, ಎತ್ತರ- 5. ಅಡಿ, ದುಂಡು ಮುಖ, ಗೋದಿ ಮೈಬಣ್ಣ, ತಳ್ಳನೆ ಮೈಕಟ್ಟು, ಕನ್ನಡ, ತೆಲುಗು ಬಾಷೆ ಮಾತನಾಡುತ್ತಾಳೆ, ಮನೆಯಿಂದ ಹೊಗುವಾಗ್ಗೆ ಧರಿಸಿರುವ ಬಟ್ಟೆಗಳು:-ಚೂಡಿಧಾರ ಧರಿಸಿಕೊಂಡು ಹೊಗಿರುತ್ತಾಳೆ. ಕಾರಣ ಕಾಣೆಯಾಗಿರುವ ನನ್ನ ರಾಧಾ ತಂದೆ ಶ್ರೀನಿವಾಸ ಬುದ್ದಾಲ ಸಾ: ಬಾಪಿರಡ್ಡಿಕ್ಯಾಂಪ್ ರವರನ್ನು ಹುಡುಕಿಕೊಡಲು ವಿನಂತಿ ಇರುತ್ತದೆ. ಅಂತಾ ಇದ್ದ ದೂರಿನ ಸಾರಾಂಶದ ಮೇಲಿಂದ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ ಗುನ್ನೆ ನಂ: 180/2023 ಕಲಂ: ಮಹಿಳೆ ಕಾಣೆ ಅಡಿ ಗುನ್ನೆ ದಾಖಲು ಮಾಡಿಕೊಂಡು ತನಿಖೆ ಕೈಗೊಂಡಿದ್ದು ಅದೆ.

2 ನೇ ಪುಟಕ್ಕೆ ........................

Scanned with OKEN Scanner

ಕಾಣೆಯಾದ ಮಹಿಳೆಯ ಬಾವಚಿತ್ರ



ಸದರ ಪ್ರಕರಣದಲ್ಲಿ ಮನುಷ್ಯ ಪತ್ತೆ ಮಾಡಲು ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ಪ್ರಕಟಣೆ ಮಾಡಲು ವಿನಂತಿ ಇರುತ್ತದೆ. ಇದರೊಂದಿಗೆ ಕಾಣೆಯಾದ ವ್ಯಕ್ತಿ ಭಾವಚಿತ್ರ ಇರುವ ಪೊಲೀಸ್ ಪ್ರಕಟಣೆ ಲಗತ್ತಿಸಿದೆ.

ದೂ.ನಿ : 08533-230854

ಮೊ.ನಿ: 9480803730.

ತಮ್ಮ ವಿಶ್ವಾಸಿ.

ಸಹಾಯಕ ಆರಕ್ಷಕ ಉಪ ನಿರೀಕ್ಷಕರು

ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ

Scanned with OKEN Scanner